**ದಿನಾಂಕ:20.07.2026 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಟಿ.ವಿ.ಎಸ್., ವಕೀಲರಿಂದ:**

ನನ್ನದು ಸೋಮೇಶ್ವರ ಗ್ರಾಮ, ಗುಡಿಬಂಡೆ ತಾಲ್ಲೂಕು. ವಾದಿಯು ನನ್ನ ಸೋದರ ಮಾವ ಇರುತ್ತಾರೆ. ನನ್ನ ಸೋದರ ಮಾವನ ಮಗಳನ್ನು ನಾನು ಮದುವೆಯಾಗಿರುತ್ತೇನೆ. ವಾದಿಯು ರಸ್ತೆಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತಾರೆ. ಸಾಕ್ಷಿಗೆ ಒಂದು ಖಚ್ಚಾ ನಕ್ಷೆಯನ್ನು ತೋರಿಸಿ ಸದರಿ ನಕ್ಷೆಯು ವಾದಿ ಮತ್ತು ಪ್ರತಿವಾದಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ. **ಸದರಿ ಖಚ್ಚಾ ನಕ್ಷೆಯನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ.3 ಎಂದು ಗುರುತಿಸಲಾಯಿತು.**

ವಾದಿಯ ಸ್ವತ್ತು ಪೂರ್ವ ಪಶ್ಚಿಮ 22 ಮತ್ತು ಉತ್ತರ ದಕ್ಷಿಣ 36 ಅಡಿಗಳು ಬಂದಿರುತ್ತದೆ ಎಂದರೆ ಸರಿ. ವಾದಿಯು ಅವರ ಸ್ವತ್ತಿನ ವಿಸ್ತೀರ್ಣವಾದ 22X36 ಕ್ಕೆ ಪೂರ್ತಿಯಾಗಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು ಅದರಲ್ಲಿ ವಾದಿ, ಪ್ರತಿವಾದಿ ಮತ್ತು ಅವರ ಇಬ್ಬರು ಸಹೋದರರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ, ಸದರಿ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ.4 ಎಂದು ಗುರುತಿಸಲಾಯಿತು.

ವಾದಿ ಮತ್ತು ಪ್ರತಿವಾದಿಯವರ ಸ್ವತ್ತುಗಳು ದಕ್ಷಿಣದ ಕೊನೆಯ ಭಾಗಕ್ಕೆ ಬರುತ್ತದೆ ಎಂದರೆ ಸರಿ. ಸದರಿಯವರು ತಮ್ಮ ಮನೆಗಳಿಂದ ರಸ್ತೆಗೆ ಬರಬೇಕಾದರೆ ಅವರು ಉತ್ತರ

ದಿಕ್ಕಿನ ಮುಖ್ಯ ರಸ್ತೆಗೆ ಬರಬೇಕು ಎಂದರೆ ಸರಿ. ವಾದಿಯು ಸಿಮೆಂಟ್ ರಸ್ತೆಗೆ ಸರ್ಜಾಗಳನ್ನು ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿ. ಅವರು ಶೆಡ್ಯೂಲ್ ಬಿ ಸ್ವತ್ತಿನಲ್ಲಿ 10 ಅಡಿಗಳ ಜಾಗದಲ್ಲೆ ಸುಮಾರು 4 ಅಡಿಗಳ ಸರ್ಜಾವನ್ನು ಬಿಟ್ಟುಕೊಂಡಿರುತ್ತಾರೆ. ವಾದಿಯು ಸರ್ಜಾವನ್ನು ಕಟ್ಟಿಕೊಂಡಿರುವುದರಿಂದ ಪ್ರತಿವಾದಿಯು ಆ ಜಾಗದಲ್ಲಿ ಶೌಚಾಲಯವನ್ನು ಸುಮಾರು 8 ಅಡಿಗಳಷ್ಟು ಕಟ್ಟಿಕೊಂಡಿರುತ್ತಾರೆ. ಅದನ್ನು ಪಂಚಾಯಿತಿಯವರಿಂದ ಸರ್ವೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಾದಿ ಮತ್ತು ಪ್ರತಿವಾದಿಯವರ ನಡುವೆ ವಿಭಾಗವಾಗಿದ್ದು, ಅದು ನೋಂದಣಿಯಾಗಿರುತ್ತದೆ ಎಂದರೆ ಸರಿ, ಆ ವಿಭಾಗ ಪತ್ರಕ್ಕೆ ನಾನು ಸಾಕ್ಷಿದಾರನಾಗಿರುತ್ತೇನೆ. ಸದರಿ ವಿಭಾಗ ಪತ್ರವು ನೋಂದಣಿಯಾಗಿಲ್ಲ ಮತ್ತು ನಾನು ಅದಕ್ಕೆ ಸಾಕ್ಷಿದಾರನಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ಸ್ವತ್ತಿನ ನಡುವೆ 10 ಅಡಿ ಜಾಗ ಬಿಟ್ಟುರುತ್ತಾರೆ ಎನ್ನುವುದಕ್ಕೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗೆ ಸುಮಾರು ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ಸಹೋದರರಾದ ಮಸ್ತಾನ್ ವಲ್ಲಿ ಮತ್ತು ಖಾಸಿಂ ಸಾಬ್ ರವರುಗಳಿಗೆ ಈ ರಸ್ತೆಯ ವಿಚಾರವಾಗಿ ಯಾವುದೇ ತಕರಾರುಗಳು ಇಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ಯವರು ತಮ್ಮ ತಮ್ಮ ಅನುಕೂಲಕ್ಕೆ ಸರ್ಜಾವನ್ನು ಬಿಟ್ಟುಕೊಂಡಿದ್ದು ಮತ್ತು ಶೌಚಾಲಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಎ ಶೆಡ್ಯೂಲ್ ನ ವಿಸ್ತೀರ್ಣವಾದ 22X36 ಅಡಿಗಳಿಗೆ ಪ್ರತಿವಾದಿಯವರಿಂದ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯ ಸ್ವತ್ತಿನ ಮಧ್ಯೆ 10 ಅಡಿ ಜಾಗವನ್ನು ಬಿಟ್ಟು ತಮ್ಮ ತಮ್ಮ ಅನುಕೂಲಕ್ಕೆ ಅದನ್ನು ಬಳಸಿಕೊಳ್ಳುತ್ತಿದ್ದು, ಅದರ ವಿಚಾರವು ಪಂಚಾಯಿತಿಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿ.

ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು ಸದರಿ ಫೋಟೋದಲ್ಲಿ ಸಿಮೆಂಟ್ ಇರುವ ಜಾಗದಲ್ಲಿ ವಾದಿ ಮತ್ತು ಅವರ ಕುಟುಂಬದವರು ಮಾತ್ರ ಓಡಾಡುತ್ತಿದ್ದು ಉಳಿದ ಶೌಚಾಲಯದ ಎದುರಿರುವ ಜಾಗದಲ್ಲಿ ಪ್ರತಿವಾದಿ ಮತ್ತು ಅವರ ಕುಟುಂಬದವರು ಓಡಾಡುತ್ತಿದ್ದಾರೆ ಎಂದರೆ ಸರಿ. **ಸದರಿ ಫೋಟೋವನ್ನು ನಿಡಿ.5 ಎಂದು ಗುರುತಿಸಲಾಯಿತು.** ಸದರಿ ವಾದಿ ಮತ್ತು ಪ್ರತಿವಾದಿಯವರು ಮೇಲೆ ಹೇಳಿದ್ದ ರಸ್ತೆಯಿಂದ ಬಂದು ಮುಖ್ಯ ರಸ್ತೆಗೆ ಹೋಗುತ್ತಿರುತ್ತಾರೆ ಎಂದರೆ ಸರಿ.

ಪ್ರತಿವಾದಿಯವರು ತಮಗೆ ಶೌಚಾಲಯವಿಲ್ಲದಿರುವುದರಿಂದ ಸದರಿ ಸ್ವತ್ತಿನ ಸುಮಾರು ಪೂರ್ವ ಪಶ್ಚಿಮ 6 ಅಡಿಗಳು ಮತ್ತು ಉತ್ತರ ದಕ್ಷಿಣ 12 ಅಡಿಗಳಲ್ಲಿ ಶೌಚಾಲಯವನ್ನು ನಿರ್ಮಿಸಿಕೊಂಡಿದ್ದು, ಉಳಿಕೆ ಜಾಗವು ಖಾಲಿಇರುತ್ತದೆ ಮತ್ತು ಅದನ್ನು ಅವರು ಓಡಾಡಲು ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ವಾದಿಗೆ ರಸ್ತೆಯ ವಿಷಯದಲ್ಲಿ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ನನ್ನ ಸೋದರ ಮಾವರಾಗಿದ್ದು ಈಗ ನಾನು ವಾದಿಯ ಮಾತುಕೇಳಿ ಅವರಿಗೆ ಸಹಾಯ ಮಾಡಲು

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯಾದ ನಮ್ಮ ಮಾವನವರು ಸದರಿ ಸ್ವತ್ತನ್ನು ಸುಮಾರು 15 ವರ್ಷದೊಳಗೆ ನಿರ್ಮಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ಸಜ್ಜಾವನ್ನು ಮನೆ ನಿರ್ಮಿಸುವಾಗಲೇ ಕಟ್ಟಿರುತ್ತಾರೆ ಮತ್ತು ಸಿಮೆಂಟ್ ನೆಲವನ್ನು ಸುಮಾರು 2 ವರ್ಷಗಳ ಹಿಂದೆ ಅಂದರೆ ಈ ದಾವೆಯನ್ನು ಹೂಡಿದ ನಂತರ ನಿರ್ಮಿಸಿರುತ್ತಾರೆ. ಸದರಿ ದಾವೆ ಹೂಡುವ ಪೂರ್ವದಲ್ಲೆ ಪ್ರತಿವಾದಿಯು ಶೌಚಾಲಯವನ್ನು ನಿರ್ಮಿಸಲು ಆರಂಭಿಸಿದ್ದು ಸದರಿ ಕಾರಣಕ್ಕಾಗಿ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಹೂಡಿದ್ದರಿಂದ ಶೌಚಾಲಯವನ್ನು ಕಟ್ಟುವ ಕೆಲಸವು ಅರ್ಧಕ್ಕೆ ನಿಂತಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ: ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.